**KANNADA PRABHA**

Date: Nov 21, 2015 Page: 3

Edition: Bangalore Language: Kannada

# ದೇಶದ ಸುಸ್ಥಿರ ಬೆಳವಣಿಗೆಗೆ ಆರೋಗ್ಯ ಸಂಪತ್ತು ಪೂರಕ

• **ಕನ್ನಡಪ್ರಭ ವಾರ್ತೆ** ಮೈಸೂರು

ಒಂದು ದೇಶದ ಭೌತಿಕ ಸಂಪತ್ತಿಗೆ ಅಲ್ಲಿನ ಆರೋಗ್ಯ ಸಂಪತ್ತು ಪೂರಕವಾಗಿದ್ದರೆ ಸುಸ್ಥಿರ ಬೆಳವಣಿಗೆ ದೀರ್ಘ ಕಾಲದವರೆಗೆ ಇರುತ್ತದೆ ಎಂದು ನೈಜರೀಯಾ ಬೇಜ್ ವಿವಿ ವಿತ್ತೀಯ ಗಣಿತ ವಿಭಾಗದ ಮುಖ್ಯಸ್ಥ ಡಾ. ಸ್ಟೀಫನ್ ಆರೋ ಗೋಡಾರ್ನ್ ಹೇಳಿದರು.

ಮೈಸೂರಿನ ಎಸ್‌ಡಿಎಂ-ಐಎಂಡಿ ಸಂಸ್ಥೆಯಲ್ಲಿ ಆಯೋಜಿಸಲಾಗಿರುವ ಜಾಗತಿಕ ಆರ್ಥಿಕ ಬೆಳವಣಿಗೆ ಹಾಗೂ ಸಂರಕ್ಷಣೆ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ವನ್ನು ಶುಕ್ರವಾರ ಉದ್ಘಾಟಿಸಿದ ಅವರು ಸ್ಥಿರ ಅಭಿವೃದ್ಧಿಗೆ ಕಿರು ಆರ್ಥಿಕ ಹೂಡಿಕೆಯ ಅವಶ್ಯಕತೆಗಳ ಬಗ್ಗೆ ಮಾತನಾಡಿದರು.

ಉದಯೋನ್ಮುಖ ಆರ್ಥಿಕ ವ್ಯವಸ್ಥೆ ಗಳು ತಮ್ಮ ಮುಂದಿನ ಪೀಳಿಗೆಗಾಗಿ ಶ್ರೀಮಂತ ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸಲು ಒತ್ತು ನೀಡುವುದು ಅಗತ್ಯ ಎಂದು ಅವರು ತಿಳಿಸಿದರು.

ಚೆನ್ನೈ ನವಿಯ ಮಾರ್ಕೆಟ್ಸ್ ಲಿಮಿಟೆಡ್ (ಟ್ರೇಡ್ ಪ್ಲಸ್) ಸಹಾಯಕ ಉಪಾಧ್ಯಕ್ಷ ಫ್ರಾನ್ಸಿಸ್ ಕುರಿಯನ್ ಮಾತನಾಡಿ, ಆರ್ಥಿಕ ಬೆಳವಣಿಗೆಯ ವೇಗ ಹೆಚ್ಚಿಸುವಲ್ಲಿ ಬಂಡವಾಳ ಮಾರುಕಟ್ಟೆಯ ಪಾತ್ರದ ಬಗ್ಗೆ ವಿವರಿಸಿದರು. ಫಾರ್ವರ್ಡ್ ಮಾರ್ಕೆಟ್ಸ್ ಕಮಿಷನ್ (ಎಫ್‌ಎಂಸಿ), ಸೇಬಿಯೊಂದಿಗೆ (ಎಸ್‌ಇಬಿಐ) ವಿಲೀನವಾದ ನಂತರ ಬಂಡವಾಳ ಮಾರುಕಟ್ಟೆಯಲ್ಲಿನ ಅವಕಾಶಗಳು ಸ್ಫೋಟಗೊಂಡಿವೆ ಎಂದರು.

ಸಮ್ಮೇಳನದಲ್ಲಿ ಭಾರತ, ಬಾಂಗ್ಲಾದೇಶ, ನೈಜೀರಿಯಾ, ಫಿಲಿಪ್ಪೀನ್ಸ್ , ಬೋಟ್ಸ್ವಾನ ಹಾಗೂ ಇರಾನ್ ದೇಶಗಳಿಂದ ಉದ್ಯಮ ಪ್ರಪ್ರಂಚ ಹಾಗೂ ಶಿಕ್ಷಣ ಕ್ಷೇತ್ರಗಳಿಗೆ ಸೇರಿದ 200 ಹೆಚ್ಚಿನ ಪ್ರತಿನಿಧಿಗಳು ಭಾಗವಹಿಸಿದ್ದಾರೆ.

ಎಸ್‌ಡಿಎಂ- ಐಎಂಡಿ ನಿರ್ದೇಶಕ ಡಾ.ಎನ್. ಆರ್. ಪರಶುರಾಮನ್ ಸ್ವಾಗತಿಸಿದರು. ಸಮ್ಮೇಳನದ ಮುಖ್ಯಸ್ಥ ಡಾ.ಬಿ. ವೆಂಕಟರಾಜ ವಂದಿಸಿದರು.